# ಕವಿತೆ

ಬರಲಿಲ್ಲ ಕೊನೆಗೆ
ಹೊರಟು ನಿಂತರೆ ಸಾಕೆ!
ಮುಂದಡಿ ಇಡಬೇಕೊಂದೊಂದೇ
ಹೆಜ್ಜೆ

‘ಯಾಸ್‌ನ ಪೊಲ್ಯಾನ’ದಲ್ಲಿ ನಿದ್ರೆಯಿರಲಿ,
ತೂಕಡಿಕೆ ಬರಲಿ ಮಲಗುವುದಿಲ್ಲ
ಇನ್ನು ‘ಕ್ಷಮಿಸಿ ಬಿಡು’ ಎಂದವಳ
ದುಗುಡ ಪ್ರಜ್ಞೆಯಲ್ಲಿ ಹೆಪ್ಪುಗಟ್ಟಿ
ಕಾಲದಾಚೆ ಪದರ
ಕೊರೆವ ಹಿಮ
ಗಾಳಿ

ವಿಶಾಲ ಉತ್ತರ ದಕ್ಷಿಣ ನಿರ್ಜನ ದಾರಿ
ಜೀವಜಲ ಹರಿದು ನೆಲದ ತುಂಬಾ ಮಲ್ಲಿಗೆ
ಚಳಿಯೇ ಕೌಚಿ ಕುಳಿತಂತೆ
ಮುಪ್ಪು ಕುಳಿತಿತ್ತು
ಹಗಲು ಮುಚ್ಚಿಕೊಂಡ ರಾತ್ರಿಯ ಹಾಗೆ
ಮಬ್ಬು
ಬೆಳಕು

ದೇಶವಿರಲಿ
ಕಾಲವೇ ಮರೆತು ಕಳೆದುಹೋಗಿದೆ
ನೆನಪುಗಳೊಳಗೆ ಜನ
ಅವನನ್ನೇ ನೆನಪಿನ ಚೀಲಕ್ಕೆ
ತುಂಬುತ್ತಿದ್ದರು ಚೂರೂ ಬಿಡದೆ
ಬೇಡ – ಬೇಕೆನಲಿಲ್ಲ
ಬಾಯಿ

ಶಾಂತಿಯೇ ಯುದ್ಧವನು ಆಕ್ರಮಿಸಿದಂತೆ
ನಿಶ್ಶಬ್ದವೇ ಆಗಿ ಕುಳಿತ ಮೌನ
ಬಹುಜನ ಪ್ರಿಯ ಜಗದ್ವಿಖ್ಯಾತ ಋಷಿ
ಒಡಲುರಿದು ತಾಮಸ ಬೂದಿಯಾಗುವುದೆಲ್ಲಾ
ತನು ಕರಗಿ ಖಾಲಿಯಾದ ಪುಳಕ
ಅನುಭಾವಿಸುವ ಕ್ಷಣ ಭಂಗುರದೆದುರು
ದುತ್ತನೆ ನಿಂತ ಪ್ರಶ್ನೆ

